# ಆಕಾಂಕ್ಷಿಯಂತೂ ಹೌದು-ಪಕ್ಷ ಜವಾಬ್ದಾರಿ ನೀಡಿದರೆ ವಹಿಸಲು ಬದ್ಧ :ಅಶೋಕ್ ರೈ



ಪುತ್ತೂರು: ಆಕಾಂಕ್ಷಿಯಂತೂ ಹೌದು, ಪಕ್ಷ ಜವಾಬ್ದಾರಿ ವಹಿಸಿದರೆ ಅದನ್ನು ನಾನು ತೆಗೆದುಕೊಳ್ಳಲು ಬದ್ಧನಿದ್ದೇನೆ. ಇಲ್ಲವಾದಲ್ಲಿ ಪಕ್ಷದ ಯಾವ ಜವಾಬ್ದಾರಿ ಕೊಟ್ಟರೂ ಅದನ್ನು ವಹಿಸಲೂ ಬದ್ಧ ಎಂದು ಉದ್ಯಮಿ, ಅಶೋಕ್ ಕುಮಾರ್ ರೈ ಕೋಡಿಂಬಾಡಿಯವರು ಪತ್ರಕರ್ತರ ಪ್ರಶ್ನೆಗೆ ತಮ್ಮ ಮನದಾಳದ ಮಾತನ್ನು ಬಿಚ್ಚಿದ್ದಾರೆ.

ಪತ್ರಿಕಾ ಭವನದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು ಮುಂದಿನ ವಿಧಾನ ಸಭಾ ಚುನಾವಣೆಗೆ ಸಂಬಂಧಿಸಿ ಯಾವ ನಾಯಕರಿಗೂ ಇಲ್ಲಿನ ತನಕ ಟಿಕೇಟ್ ಭರವಸೆ ಸಿಕ್ಕಿಲ್ಲ. ಕೇಂದ್ರ ರಾಷ್ಟ್ರೀಯ ನಾಯಕರ, ಗುಪ್ತಚರ ವರದಿಯನ್ನು ಆಧರಿಸಿ ಯಾರಿಗೆ ಗೆಲ್ಲಲು ಅವಕಾಶವಿದೆಯೋ ಅವರಿಗೆ ಸೀಟು ಲಭ್ಯವಾಗಲಿದೆ. ಟಿಕೇಟ್ ಸಿಗದಿದ್ದರೆ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ನಿರ್ವಹಿಸಲಿದ್ದೇನೆ. ನಾನು ಬೇರೆ ಪಕ್ಷದಿಂದ ಬಿಜೆಪಿಗೆ ಬಂದವನಲ್ಲ. ಹುಟ್ಟಿನಿಂದಲೇ ಬಿಜೆಪಿ ಪಕ್ಷದಲ್ಲಿದ್ದೇನೆ. ಇವತ್ತಿನ ತನಕವೂ ಪಕ್ಷದ ತತ್ವ ಆಧಾರಿಸಿಕೊಂಡು ಬರುತ್ತಿದ್ದೇನೆ. ಪಕ್ಷವು ಕೆಲವು ಜವಾಬ್ದಾರಿ ನೀಡಿದೆ. ಅದನ್ನು ಉತ್ತಮ ಮಟ್ಟದಲ್ಲಿ ನಿರ್ವಹಿಸಿದ್ದೇನೆ. ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯನಾಗಿ ಒಳ್ಳೆಯ ರೀತಿಯಲ್ಲಿ ಕೆಲಸ (2ನೇ ಪುಟಕ್ಕೆ)

## ಮನೆ ಇಲ್ಲದವರಿಗೆ 4 ಸೆಂಟ್ಸ್ ಸ್ಥಳ ಒಂದು ವರ್ಷದೊಳಗಿನ ಯೋಜನೆ

ದೀನ್ ದಯಾಳ್ ಉಪಾಧ್ಯಾಯರ ಧ್ಯೆಯವೆಂಬಂತೆ ಬಡಜನರ ಸೇವೆ ಮಾಡುವುದು ನನ್ನ ಗುರಿ. ಅದಕ್ಕಾಗಿ ಟ್ರಸ್ಟ್ ಅಜೆಂಡಾದಲ್ಲಿ ವಿಧಾನಸಭಾ ವ್ಯಾಪ್ತಿಯಲ್ಲಿ ವಿದ್ಯುತ್, ನೀರು, ಮನೆ ಸೌಲಭ್ಯ ಇಲ್ಲದವರಿಗೆ ಪ್ರತಿ 5 ಕಿ.ಮೀ ವ್ಯಾಪ್ತಿಯಲ್ಲಿ 5 ರಿಂದ 10 ಎಕ್ರೆ ಸ್ಥಳ ಖರೀದಿಸಿ. ಅಲ್ಲಿ ಮನೆ ಇಲ್ಲದವರಿಗೆ, ವಿಧವೆಯರಿಗೆ , ಬಡವರಿಗೆ 4 ಸೆಂಟ್ಸ್ ಸ್ಥಳ ಕೊಡುವ ಮೂಲಕ ಅವರ ಸ್ವಂತ ಜೀವನ ನಡೆಸಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಅದು ಮುಂದಿನ ಒಂದು ವರ್ಷಧ ಒಳಗೆ ಕಾರ್ಯಗತಗೊಳ್ಳಲಿದೆ ಎಂದು ಅಶೋಕ್ ಕುಮಾರ್ ರೈ ಹೇಳಿದರು.

# ಆಕಾಂಕ್ಷಿಯಂತೂ ಹೌದು-ಪಕ್ಷ ಜವಾಬ್ದಾರಿ ನೀಡಿದರೆ ವಹಿಸಲು ಬದ್ಧ :ಅಶೋಕ್ ರೈ

ಮಾಡುತ್ತಿದ್ದೇನೆ. ಪಕ್ಷದ ಒಳಿತಿಗಾಗಿ ಕೆಲಸ ನಿರ್ವಹಿಸುತ್ತೇನೆ ಎಂದ ಅವರು ನಾನು ಯಾವ ಪಕ್ಷಕ್ಕೂ ಹೋಗುವುದಿಲ್ಲ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು. ಜೊತೆಗೆ ರಾಷ್ಟ್ರೀಯ ಮುಖಂಡರೊಂದಿಗೆ ಹಿಂದಿನಿಂದಲೂ ಬೇರೆ ಬೇರೆ ವಿಚಾರದಲ್ಲಿ ಅದರಲ್ಲೂ ಅಡಿಕೆಗೆ ಹೋರಾಟ, ಕಂಬಳದ ವಿಚಾರದಲ್ಲಿ ಸಂಪರ್ಕವಿಟ್ಟುಕೊಂಡಿದ್ದೇನೆ ಹೊರತು ಟಿಕೇಟ್‌ಗಾಗಿ ಅಲ್ಲ ಎಂದರು.

**ಕಾಂಗ್ರೆಸ್ ಅಭಿವೃದ್ಧಿ ಕೆಲಸ ಮಾಡಿಲ್ಲ:** ಕಳೆದ 5 ವರ್ಷದಲ್ಲಿ ಕಾಂಗ್ರೆಸ್ ಪಕ್ಷ ಪುತ್ತೂರಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಕಳೆದ ಎರಡುಮೂರು ತಿಂಗಳಿನಿಂದ ಆ ರಸ್ತೆಗೆ ಇಷ್ಟು, ಈ ರಸ್ತೆಗೆ ಇಷ್ಟು ಬಂದಿದೆ ಎಂದು ಕೋಟಿ ರೂಪಾಯಿ ಅನುದಾನ ತಂದಿದ್ದೇನೆ ಎಂದು ಹೇಳುವುದಲ್ಲದೆ. ಎಲ್ಲಿಯೂ ರಸ್ತೆ ಆಗಿಲ್ಲ. ಕೇವಲ ತೆಂಗಿನ ಕಾಯಿ ಒಡೆಯುವ ಕೆಲಸ ಆಗಿದೆ. ಇದು ಜನಪ್ರತಿನಿಧಿಗಳು ಮಾಡುವ ಕೆಲಸ ಅಲ್ಲ. ಅದು ಇಲಾಖೆಯಿಂದ ತನ್ನಿಂದ ತಾನಾಗಿಯೇ ಕೆಲಸ ಆಗುತ್ತದೆ. ಅದು ಅಲ್ಲದೆ ಚುನಾವಣೆ ಹತ್ತಿರ ಬರುವ ಸಮಯದಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಕೇವಲ ಆಶ್ವಾಸನೆ ಕೊಡುವ ಕೆಲಸ ಮಾತ್ರ. ಆಗುವಂತಹ ಕೆಲಸ ಆಗಿದ್ದರೆ ಅದು ಇವತ್ತಿನ ಒಳಗೆ ಮುಗಿಯಬೇಕಾಗಿತ್ತು. ಕ್ಷೇತ್ರಕ್ಕೆ ಸಂಬಂಧಿಸಿ ಸರಿಯಾದ ಚರಂಡಿ, ಆಟದ ಮೈದಾನವಿಲ್ಲ, ಕುಡಿಯುವ ನೀರಿನ ಸಮಸ್ಯೆ, ಎಷ್ಟೋ ಜನ ಬಡ ಜನರು ಬಾಡಿಗೆ ಮನೆಯಲ್ಲಿದ್ದು ಕಡಿಮೆ ಸಂಬಳದಲ್ಲಿ ಜೀವನ ಮಾಡುವ ಪರಿಸ್ಥಿತಿ ಇದೆ. ಅವರೆನ್ನೆಲ್ಲಾ ಅಭಿವೃದ್ಧಿ ಪಡಿಸುವುದು ಜನಪ್ರತಿನಿಧಿಗಳ ಕರ್ತವ್ಯ. ಅದನ್ನು ಇನ್ನೂ ಮಾಡಿಲ್ಲ ಎಂದು ಅಶೋಕ್ ಕುಮಾರ್ ರೈ ಆರೋಪಿಸಿದರು.

## ಸ್ವಚ್ಛತೆ ನದಿ ಕಿನಾರೆಯಲ್ಲಿ ಆಗಬೇಕಾಗಿದೆ

ಪ್ರಧಾನಿ ಮೋದಿಯವರ ಸ್ವಚ್ಛತಾ ಆಂದೋಲನ ದೇಶದ ವಿವಿಧ ಕಡೆ ಯಶಸ್ವಿಯಾಗಿ ನಡೆಯುತ್ತಿದೆ. ಆದರೆ ಉಪ್ಪಿನಂಗಡಿಯ ನದಿ ದಡದಲ್ಲೇ ಸುಮಾರು 20ಕ್ಕೂ ಅಧಿಕ ಕುಟುಂಬಗಳು ಡೇರೆ ಹಾಕಿ ಜೀವನ ನಡೆಸುತ್ತಿದ್ದು ಅವರು ಅಲ್ಲೇ ಮಲ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಅದೇ ನದಿ ನೀರು ಪುತ್ತೂರಿಗೂ ಬರುತ್ತಿದೆ. ಜನತೆ ಎಚ್ಚರವಾಗಬೇಕು. ರಸ್ತೆ ಡಾಮರೀಕರಣಕ್ಕೆ ಅಥವಾ ಇತರ ಗುತ್ತಿಗೆ ಆಧಾರಿತವಾಗಿ ಕೆಲಸಕ್ಕೆಂದು ಬಂದ ಅಲೆಮಾರಿಗಳನ್ನು ಸಂಬಂಧಪಟ್ಟ ಗುತ್ತಿಗೆದಾರರೇ ಬಾಡಿಗೆ ಕಟ್ಟಡದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಸಬೇಕು. ಅದು ಬಿಟ್ಟು ಅವರುಗಳನ್ನು ನದಿ ಕಿನಾರೆಯಲ್ಲಿ ಬಿಟ್ಟು ಹೋಗುವುದು ತಪ್ಪು. ನದಿ ಕಿನಾರೆಯಿಂದ ಅವರನ್ನು ತೆರವುಗೊಳಿಸುವಂತೆ ಸಹಾಯಕ ಕಮೀಷನರ್, ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗುವುದು ಎಂದು ಅಶೋಕ್ ಕುಮಾರ್ ರೈ ಹೇಳಿದರು.

24/12/2018